# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 128 | Pages. 2 | Date: 21-03-2025, FRIDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 128 - ಪುಟಗಳು : 2 - 21 ಮಾರ್ಚ್ 2025 ಶುಕ್ರವಾರ | Ph: 8762954248 | ದರ : ₹1


# ಜನರ ನಿದ್ದೆಗೆಡಿಸಿದ್ದ ವಿಕ್ರಾಂತ್ ಕೊನೆಗೂ ಸೆರೆ

## ಸತತ ಆರು ಗಂಟೆ ಕಾರ್ಯಾಚರಣೆ ಯಶಸ್ಸು | ಅರಣ್ಯ ಇಲಾಖೆ, ಸ್ಥಳೀಯರು ನಿರಾಳ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಮೂರ್ನಾಲ್ಕು ವರ್ಷಗಳಿಂದ ಅರಣ್ಯ ಇಲಾಖೆಗೆ ಚಳ್ಳೆಹಣ್ಣು ತಿನ್ನಿಸುತ್ತಾ, ಸ್ಥಳೀಯರ ನೆಮ್ಮದಿಗೆ ಭಂಗ ತಂದಿದ್ದ ವಿಕ್ರಾಂತ್ ಹೆಸರಿನ ಕಾಡಾನೆಯನ್ನು ಗುರುವಾರ ಸಾಕಷ್ಟು ಪ್ರಯತ್ನಗಳ ಬಳಿಕ ಸೆರೆ ಹಿಡಿಯಲಾಯಿತು.



ಬೇಲೂರು ಭಾಗದಲ್ಲಿ ಕಾಡಾನೆಗಳ ದಾಳಿಗೆ ಇಪ್ಪತ್ತು ದಿನಗಳ ಅಂತರದಲ್ಲಿ ನಾಲ್ವರು ಮೃತಪಟ್ಟಿದ್ದರಿಂದ ಪುಂಡಾನೆ ಸೆರೆಗೆ ಸರ್ಕಾರ ಕ್ರಮ ವಹಿಸಿದೆ. ಕಳೆದ ಭಾನುವಾರ 18 ರಿಂದ 20 ವರ್ಷದ ಗಂಡಾನೆಯನ್ನು ಸೆರೆ ಹಿಡಿಯಲಾಗಿತ್ತು. ನಂತರ ವಿಕ್ರಾಂತ್ ಆನೆ ಸೆರೆಗೆ ಮೂರು ದಿನ ಕಾರ್ಯಾಚರಣೆ ಕೈಗೊಳ್ಳಲಾಗಿತ್ತಾದರೂ ಗುಂಪಿನಿಂದ ಅದು ಹೊರಗೆ ಬಾರದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ವಿಫಲವಾಗಿತ್ತು. ಆದರೆ ಗುರುವಾರ ಎಲ್ಲವೂ ಅಂದುಕೊಂಡಂತೆ ಆಗಿದ್ದು ಅರಣ್ಯ ಇಲಾಖೆ ತನ್ನ ಕಾರ್ಯ ಸಾಧಿಸಿದೆ. ಆ ಮೂಲಕ ಸ್ಥಳೀಯರು ತುಸು ನಿರಾಳರಾಗಿದ್ದಾರೆ.

ಸಾರ್ವಜನಿಕರ ಮೇಲೆ ಮತ್ತು ರಸ್ತೆಯಲ್ಲಿ ಸಂಚರಿಸುವ ವಾಹನಗಳ ಮೇಲೆ ದಾಳಿ ಮಾಡುತ್ತಾ ಬೆಳೆ ನಾಶ, ಆಸ್ತಿ ನಷ್ಟ ಉಂಟು ಮಾಡುತ್ತಿದ್ದ 30 ರಿಂದ 35 ವರ್ಷದ ವಿಕ್ರಾಂತ್‌ನನ್ನು ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್‌ಕುಮಾರ್ ಹೇಳಿದ್ದಾರೆ. ಸಕಲೇಶಪುರ ತಾಲ್ಲೂಕಿನ ಬ್ಯಾದನೆ ಗ್ರಾಮದ ಬಳಿಯ ಕಾಫಿ ತೋಟದಲ್ಲಿ ಆನೆ ಸಿಕ್ಕಿದೆ. ಸ್ಥಳದಲ್ಲಿ ಸಿಸಿಎಫ್ ಏಡುಕುಂಡಲ, ನಾಗರಹೊಳೆ ಮತ್ತು ಬಂಡಿಪುರ ಪಶು ವೈದ್ಯಾಧಿಕಾರಿಗಳು ಮತ್ತಿತರರಿದ್ದರು.

## ಕೂದಲೆಳೆ ಅಂತರದಲ್ಲಿ ಪಾರು

ಕಾಡಾನೆ ಸೆರೆಗಾಗಿ ಮತ್ತಿಗೋಡು ಹಾಗೂ ದುಬಾರೆ ಕ್ಯಾಂಪ್‌ನಿಂದ ಏಳು ಸಾಕಾನೆಗಳು ಬಂದಿವೆ. ಜತೆಗೆ 200ಕ್ಕೂ ಹೆಚ್ಚು ಅರಣ್ಯ ಹಾಗೂ ಪೊಲೀಸ್ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೂರನೇ ದಿನದ ಕಾರ್ಯಾಚರಣೆ ಕೈಗೊಂಡಿದ್ದ ಗುರುವಾರ ಬೇಲೂರು ತಾಲ್ಲೂಕಿನ ವಾಟೇಹಳ್ಳಿ ಬಳಿ ಇಟಿಎಫ್ ಸಿಬ್ಬಂದಿ ವಿಕ್ರಾಂತ್ ಇರುವುದನ್ನು ಖಚಿತಪಡಿಸಿಕೊಂಡು ಅಲ್ಲಿಗೆ ತೆರಳಿದ್ದರು. ವಿಕ್ರಾಂತ್ ಬರುತ್ತಿರುವುದನ್ನು ಅರಿತ ಅವರು ಅಪಾಯದಿಂದ ಪಾರಾಗಲು ತಕ್ಷಣವೇ ಮರವೇರಿ ಕುಳಿತರು. ವಿಕ್ರಾಂತ್ ಜೊತೆಗೆ ಮತ್ತೊಂದು ಆನೆಯು ಬಂದಿತು. ಮನುಷ್ಯರ ವಾಸನೆ ಗ್ರಹಿಸಿ ಅಲ್ಲಿಗೆ ದೌಡಾಯಿಸಿದ ವಿಕ್ರಾಂತ್‌ನ ಜಾಣ್ಮೆಗೆ ಸಿಬ್ಬಂದಿ ಬೆಚ್ಚಿಬಿದ್ದರು. ಕೆಲ ಹೊತ್ತು ಅಲ್ಲೇ ಸುಳಿದಾಡಿದ ವಿಕ್ರಾಂತ್ ಬಂದ ದಾರಿಯಲ್ಲೇ ವಾಪಸ್ಸಾಯಿತು.

ನಂತರ ಕಾರ್ಯಾಚರಣೆಯಲ್ಲಿ ಸಾಕಾನೆಗಳು ಭಾಗವಹಿಸಿದ ಬಳಿಕ ವಿಕ್ರಾಂತ್ ಜೊತೆ ದೈತ್ಯಾಕಾರದ ಮತ್ತೊಂದು ಕಾಡಾನೆ ಭೀಮ ಸೇರಿಕೊಂಡ. ವಿಕ್ರಾಂತ್ ಮತ್ತು ಭೀಮನನ್ನು ಬೇರ್ಪಡಿಸುವುದು ಅರಣ್ಯ ಇಲಾಖೆಗೆ ತಲೆ ನೋವಿನ ಕೆಲಸವಾಯಿತು. ಇಬ್ಬರನ್ನೂ ಬೇರೆ ಮಾಡಲು ಭೀಮನಿಗೆ ಅರವಳಿಕೆ ಚುಚ್ಚುಮದ್ದು ನೀಡುವುದು ಅನಿವಾರ್ಯವಾಯಿತು. ಕಷ್ಟಪಟ್ಟು ಭೀಮನಿಗೆ ಚುಚ್ಚುಮದ್ದು ನೀಡಲಾಯಿತಾದರೂ ಆತ ಸಂಪೂರ್ಣ ಪ್ರಜ್ಞೆ ತಪ್ಪಲಿಲ್ಲ. ಅದಾದ ಬಳಿಕ ವಿಕ್ರಾಂತ್‌ನಿಗೆ ಅರವಳಿಕೆ ಚುಚ್ಚುಮದ್ದು ನೀಡುತ್ತಿದ್ದಂತೆ ಕಾಫಿ ತೋಟದೊಳಗಿಂದ ವೇಗವಾಗಿ ಓಡಲಾರಂಭಿಸಿದ ವಿಕ್ರಾಂತ್ ಅರೇಹಳ್ಳಿ-ಸಕಲೇಶಪುರ ರಸ್ತೆ ದಾಟಿ ಕಾಫಿ ತೋಟಕ್ಕೆ ಬಂದು ಕುಸಿದು ಬಿದ್ದಿತು. ಕೂಡಲೇ ಕಾರ್ಯಪ್ರವೃತ್ತರಾದ ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿ ಪುಂಡಾನೆಗೆ ಹಗ್ಗಕಟ್ಟಿ, ನೀರು ಹಾಕಿದರು. ಏಳು ಸಾಕಾನೆಗಳು ವಿಕ್ರಾಂತ್ ಸುತ್ತುವರೆದವು. ವಿಕ್ರಾಂತ್ ಎಚ್ಚರವಾಗುತ್ತಿದ್ದಂತೆ ಆರ್ಭಟಿಸಿತು. ಆದರೆ ಕುಮ್ಕಿ ಆನೆಗಳು ವಿಕ್ರಾಂತ್‌ನ ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾದವು.



ಕಾಫಿ ತೋಟದಿಂದ ಏಕಲವ್ಯ ನೇತೃತ್ವದಲ್ಲಿ ವಿಕ್ರಾಂತ್‌ನನ್ನು ರಸ್ತೆಗೆ ಎಳೆದು ತಂದವು. ನಂತರ ಕ್ರೇನ್ ಸಹಾಯದಿಂದ ಪುಂಡಾನೆಯನ್ನು ಲಾರಿಗೆ ಹತ್ತಿಸಿ ಸ್ಥಳಾಂತರ ಮಾಡಲಾಯಿತು. ವಿಕ್ರಾಂತ್‌ನನ್ನು ನೋಡಲು ಸಾವಿರಾರು ಜನರು ರಸ್ತೆ ಇಕ್ಕೆಲಗಳಲ್ಲಿ ನಿಂತಿದ್ದರಿಂದ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಡಬೇಕಾಯಿತು.

# ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಅಭಿಪ್ರಾಯ ಮಂಡನೆ ಸ್ಪರ್ಧೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಕನ್ನಡ ವಿಭಾಗ ಮತ್ತು ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಿಂದ ಗುರುವಾರ ಡಾ. ಕೆ ಶಿವರಾಮ ಕಾರಂತರ ಕೃತಿಗಳ ಕುರಿತು ನಾ ಮೆಚ್ಚಿದ ಕೃತಿ-ಅಭಿಪ್ರಾಯ ಮಂಡನೆ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು.

ಹೊಳೆನರಸೀಪುರ ಸರ್ಕಾರಿ ಮಹಿಳಾ ಗೃಹ ವಿಜ್ಞಾನ ಕಾಲೇಜು ಪ್ರಾಧ್ಯಾಪಕ ಡಾ. ಹೆಚ್.ಕೆ. ಅಶೋಕ್ ಮಾತನಾಡಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಶಿವರಾಮ ಕಾರಂತರ ವೈಜ್ಞಾನಿಕ ಬರಹಗಳನ್ನು ವಿಜ್ಞಾನ ವಿದ್ಯಾರ್ಥಿಗಳು ಓದುವ ಮೂಲಕ ಜ್ಞಾನದ ಪರಿಧಿ ವಿಸ್ತರಿಸಿಕೊಳ್ಳೇಕು ಎಂದು ಹೇಳಿದರು.

ವಿದ್ಯಾರ್ಥಿಗಳು ಕೇವಲ ಪಠ್ಯ ಪುಸ್ತಕ ಅಧ್ಯಯನಕ್ಕೆ ಸೀಮಿತರಾಗದೆ ಸಾಹಿತ್ಯದ ಅಭಿರುಚಿ ಬೆಳೆಸಿಕೊಳ್ಳಬೇಕು. ಶಿವರಾಮ ಕಾರಂತರು ಕೇವಲ ಕಾದಂಬರಿಕಾರರು ಮಾತ್ರವಲ್ಲದೆ ವಿಜ್ಞಾನ ಲೇಖಕರು ಆಗಿದ್ದರು ಎಂದರು.

ಪ್ರಾಂಶುಪಾಲ ಕೆ.ಎಸ್. ಪ್ರಸನ್ನ ಅಧ್ಯಕ್ಷತೆ ವಹಿಸಿದ್ದರು. ಪ್ರಥಮ ಮತ್ತು ದ್ವಿತೀಯ ವರ್ಷದ ಪದವಿ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ರಸಾಯನಶಾಸ್ತ್ರ ವಿಭಾಗದ 21 ವಿದ್ಯಾರ್ಥಿಗಳು ಕಾರಂತರ ವಿವಿಧ ಕಾದಂಬರಿ ಕುರಿತು ಅಭಿಪ್ರಾಯ ಮಂಡಿಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಸ್. ಸುಂದರೇಶ್, ಶೈಕ್ಷಣಿಕ ಡೀನ್ ರಾಮಯ್ಯ ನಾಯಕ್, ಭೌತಶಾಸ್ತ್ರ ವಿಭಾಗದ ಕೃಷ್ಣ ಮೋಹನ, ಸಸ್ಯಶಾಸ್ತ್ರ ವಿಭಾಗ ಮುಖ್ಯಸ್ಥ ಡಾ. ಧರ್ಮೇಂದ್ರ, ಪತ್ರಾಂಕಿತ ವ್ಯವಸ್ಥಾಪಕ ಹೆಚ್.ಎಂ. ಕಿರಣ ಇತರರಿದ್ದರು. ಗ್ರಂಥಪಾಲಕ ಡಾ. ಹೆಚ್.ಎನ್. ಹೇಮೇಶ ಪ್ರಾಸ್ತಾವಿಕವಾಗಿ ಮಾತನಾಡಿದರು. ಕನ್ನಡ ವಿಭಾಗದ ಸಹ ಪ್ರಾಧ್ಯಾಪಕ ಎನ್.ಸಿ. ರವಿ ನಿರೂಪಿಸಿದರು.

# ಗಾಂಧೀಜಿ ಆದರ್ಶ ಪಾಲಿಸದ ರಾಜಕಾರಣಿಗಳು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗುಡಿ ಕೈಗಾರಿಕೆಗಳಿಂದ ರಾಷ್ಟ್ರದ ಅಭಿವೃದ್ಧಿ ಸಾಧ್ಯವೆಂದು ಮಹಾತ್ಮ ಗಾಂಧೀಜಿ ಹೇಳಿದ್ದರೂ ಭಾರತದ ಯಾವ ರಾಜಕಾರಣಿಗಳು ಪಾಲಿಸಲಿಲ್ಲ. ಮಹಾತ್ಮನ ಹೆಸರಿನಲ್ಲಿ ರಾಜಕೀಯ ಮಾಡುತ್ತಾರೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ಬೋರಲಿಂಗಯ್ಯ ಹೇಳಿದರು.


ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕದಿಂದ ನಗರದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ಡಾ. ಹಂಪನಹಳ್ಳಿ ತಿಮ್ಮೇಗೌಡರ ನಾಲ್ಕು ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿ, ಮಹಾತ್ಮ ಗಾಂಧೀಜಿ ಅವರನ್ನು ಭಾಷಣಗಳಲ್ಲಿ ಸ್ಮರಿಸುತ್ತಾ, ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ರಾಜಕಾರಣಿಗಳು ಅವರ ತತ್ವಾದರ್ಶಗಳ ಅಳವಡಿಸಿಕೊಳ್ಳುವಲ್ಲಿ ಹಿಂದೇಟು ಹಾಕುತ್ತಿದ್ದಾರೆ ಎಂದು ಕಿಡಿಕಾರಿದರು.

ತಿಮ್ಮೇಗೌಡರು ಜಾನಪದ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಕೆಲಸ ಮಾಡಿದ್ದಾರೆ. ವೈವಿಧ್ಯಮಯ ವಿಷಯವನ್ನು ಅವರ ಪುಸ್ತಕಗಳು ಒಳಗೊಂಡಿವೆ. ಸಮಾಜಮುಖಿಯಾಗಿ, ಸುಸಂಸ್ಕೃತ, ಸರಳ ವ್ಯಕ್ತಿಯಾಗಿ ನಮ್ಮೊಂದಿಗಿದ್ದಾರೆ. ಅಧ್ಯಾಪಕ ವೃತ್ತಿ ಜೊತೆಗೆ ಬರಹ ವೈಗೂಡಿಸಿಕೊಂಡಿರುವುದು ಸಾಧನೆಯೇ ಸರಿ ಎಂದರು.

ಗಾಂಧಿ ಮತ್ತು ಇತರ ಲೇಖನಗಳು ಎಂಬ ಕೃತಿ ಓದುಗರನ್ನು ಆಳವಾದ ಚಿಂತನೆಗೆ ಒಳಪಡಿಸುತ್ತದೆ. ನವ ಸಮಾಜದಲ್ಲಿ ನಾವು ವಿಸ್ಮೃತಿಗೆ ಒಳಗಾಗಿದ್ದೇವೆ. ಮೂಲ ಸಂಸ್ಕೃತಿ, ಆಚಾರ ವಿಚಾರಗಳನ್ನು ಮರೆತು ಆಧುನಿಕತೆಗೆ ಮಾರು ಹೋಗುತ್ತಿದ್ದೇವೆ. ಪ್ರಸ್ತುತ ದಿನಗಳಲ್ಲಿ ಮಹಾತ್ಮ ಗಾಂಧೀಜಿ ಅವರ ಪ್ರಸ್ತುತತೆ ಏಕೆ ಎಂಬುದನ್ನು ಎಲ್ಲರೂ ಅರಿಯಬೇಕು. ದೇಶ ಅಭಿವೃದ್ಧಿಯಾಗಬೇಕೆಂದರೆ ಹಳ್ಳಿಗಳು ಪ್ರಗತಿ ಸಾಧಿಸಬೇಕೆಂದು ಗಾಂಧೀಜಿ ಹೇಳಿದ್ದರು. ಗುಡಿ ಕೈಗಾರಿಕೆಗೆ ಆದ್ಯತೆ ನೀಡಿದ್ದರು. ಆದರೆ ನಮ್ಮ ರಾಜಕಾರಣಿಗಳು ಬಂಡವಾಳ ಶಾಹಿಗಳಾಗಿ ವ್ಯವಸ್ಥೆಯನ್ನೇ ಹಾಳು ಮಾಡಿದರು. ಚೀನಾದ ಆರ್ಥಿಕ ಹಾಗೂ ಉದ್ಯೋಗ ಸೃಷ್ಟಿಯಲ್ಲಿ ಸಾಧನೆ ಮಾಡಲು ಗುಡಿ ಕೈಗಾರಿಕೆಗಳೇ ಕಾರಣ ಎಂದರು.

ಹಂಪನಹಳ್ಳಿ ತಿಮ್ಮೇಗೌಡರ ದಾಸೊಕ್ಕಲಿಗರು, ದೇಶಿಯೊಳ್ ಚೆಲ್ವು, ಮರೆಯದ ಮಹನೀಯರು, ಗಾಂಧಿ ಮತ್ತು ಇತರ ಲೇಖನಗಳು ಕೃತಿ ಬಿಡುಗಡೆ ಮಾಡಲಾಯಿತು. ಹಾಸನ ವಿಶ್ವವಿದ್ಯಾಲಯ ಕನ್ನಡ ಪ್ರಾಧ್ಯಾಪಕ ಡಾ. ಪುಟ್ಟಸ್ವಾಮಿ ಹಾಗು ನಿವೃತ್ತ ಪ್ರಾಂಶುಪಾಲ ತಿರುಪತಿಹಳ್ಳಿ ಶಿವಶಂಕರಪ್ಪ ಕೃತಿ ಪರಿಚಯ ಮಾಡಿಕೊಟ್ಟರು.

# ವಿಘ್ನಸಂತೆ ಗ್ರಾಮ ದೇವತೆ ಜಾತ್ರೆ ಸಂಪನ್ನ




ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಸಮೀಪದ ವಿಘ್ನಸಂತೆ ಗ್ರಾಮ ದೇವತೆ ಶ್ರೀ ಆದಿಶಕ್ತಿ ಗದ್ದೆಕೆಂಪಮ್ಮ ದೇವಿಯ ಹಬ್ಬ, ರಥೋತ್ಸವ ವೈಭವದಿಂದ ಜರುಗಿತು.

ಶನಿವಾರ ದೇಗುಲಕ್ಕೆ ಹೂವಿನ ಚಪ್ಪರ ಹಾಕಲಾಗಿದ್ದು ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಮಾರಿಹಬ್ಬ ಹಾಗು ದೇವಿಗೆ ಆರತಿ ನೈವೇದ್ಯ ನಡೆಯಿತು. ಸೋಮವಾರ ಗಂಗಾಸ್ನಾನ ಮತ್ತು ವಿವಿಧ ಧಾರ್ಮಿಕ ಕೈಂಕರ್ಯ ನೆರವೇರಿದವು. ಶ್ರೀ ಗದ್ದೆಕೆಂಪಮ್ಮ ಮತ್ತು ದೇವಿಯ ಸಹೋದರಿ ಶ್ರೀ ಬಿದರಕೆರಮ್ಮ ದೇವಿಯ ಉತ್ಸವ ಮೂರ್ತಿಯನ್ನು ಒಡವೆ, ವಸ್ತ್ರ ಹಾಗು ವಿವಿಧ ಬಗೆಯ ಪುಷ್ಪಗಳಿಂದ ಅಲಂಕರಿಸಲಾಯಿತು. ಮಂಗಳವಾರ ಬೆಳಗ್ಗೆ ಸುಮಾರಿನಲ್ಲಿ ಶ್ರೀ ಗದ್ದೆಕೆಂಪಮ್ಮ ದೇವಿಯ ಅಡ್ಡ ಪಲ್ಲಕ್ಕಿ ಉತ್ಸವ ಗ್ರಾಮದ ಪ್ರಮುಖ ಬೀದಿಯಲ್ಲಿ ಸಾಗಿತು. ಮಧ್ಯಾಹ್ನ ಸುಮಾರನಲ್ಲಿ ಅಲಂಕೃತಗೊಂಡಿದ್ದ ರಥದ ಮೇಲೆ ದೇವಿಯನ್ನು ಪ್ರತಿಷ್ಠಾಪಿಸಲಾಯಿತು. ಪ್ರಧಾನ ಅರ್ಚಕರು ವಿಶೇಷ ಪೂಜೆ ಸಲ್ಲಿಸುತ್ತಿದ್ದಂತೆಯೇ ಭಕ್ತರು ಹಗ್ಗ ಹಿಡಿದು ರಥವನ್ನು ಎಳೆದರು.

# ಮಹಿಳೆಯರು ಆರೋಗ್ಯಕ್ಕೆ ಆದ್ಯತೆ ನೀಡಬೇಕು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದ್ದು ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡಬೇಕು ಎಂದು ಶ್ರೀ ಧರ್ಮಸ್ಥಳ ಆಯುರ್ವೇದ ಆಸ್ಪತ್ರೆಯ ಡಾ. ಸವಿತಾ ಅವರು ಸಲಹೆ ನೀಡಿದರು.



ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿ, ಯೋಗ, ಪ್ರಾಣಾಯಾಮದಂತಹ ಚಟುವಟಿಕೆಗಳನ್ನು ಅಳವಡಿಸಿಕೊಂಡರೆ ಸದೃಢ ಆರೋಗ್ಯ ಹೊಂದಬಹುದು. ಮಹಿಳೆಯರು ಮಾನಸಿಕ ಖಿನ್ನತೆ, ಆತಂಕ ಸೇರಿ ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಗರ್ಭಿಣಿಯರು ಆರಂಭದ ಒಂದು ತಿಂಗಳು ಜೋಪಾನವಾಗಿರಬೇಕು. ಹೆರಿಗೆ ಆದಮೇಲೆ ಮಹಿಳೆಯಲ್ಲಿ ಆಗುವ ಬದಲಾವಣೆ, ಮಾನಸಿಕ ಬದಲಾವಣೆಗಳನ್ನು ಗಮನಿಸಬೇಕು. ಒಂದು ಕಡೆ ಗೃಹಣಿಯಾಗಿ ಮನೆ ನೋಡಿಕೊಳ್ಳುವುದು, ಹಿರಿಯರನ್ನು ಗಮನಿಸುವುದು ಎಲ್ಲವನ್ನೂ ಮಹಿಳೆ ಮಾಡಬೇಕು. ಈ ವೇಳೆ ಆಕೆ ಅನೇಕ ಸಮಸ್ಯೆ ಎದುರಿಸುತ್ತಿರುತ್ತಾಳೆ. 40ನೇ ವಯಸ್ಸಿನಿಂದಲೇ ಬದಲಾವಣೆ ಕಂಡು ಬರುತ್ತದೆ. ಶಾರೀರಿಕವಾಗಿ ಕೆಲಸ ಮಾಡುವಾಗ ದೇಹದಲ್ಲಿ ಕೆಮಿಕಲ್ಸ್ ಉತ್ಪತ್ತಿ ಆಗುತ್ತದೆ. ಆಗ ದೇಹದಲ್ಲಿ ಅನೇಕ ಬದಲಾವಣೆ ಕಾಣಬಹುದು ಎಂದರು.

ಮಹಿಳೆಯರು ಕುಟುಂಬದ ಎಲ್ಲಾ ಜವಾಬ್ದಾರಿ ತೆಗೆದುಕೊಳ್ಳುತ್ತಾಳೆ. ಆದರೆ ಅವರ ಬಗ್ಗೆ ಎಚ್ಚರಿಕೆ ವಹಿಸುವುದಿಲ್ಲ. ಮಹಿಳೆ ಎಂದರೆ ಕುಟುಂಬದ ಆಧಾರ ಸ್ತಂಭ, ಹೆಣ್ಣಿಗೆ ಮಾತ್ರ ವಿಶೇಷ ಗುಣಗಳಿದ್ದು, ಎಲ್ಲರನ್ನೂ ನೋಡಿಕೊಳ್ಳುವ ಮೃದು ಸ್ವಭಾವ ಇರುತ್ತದೆ ಎಂದು ಹೇಳಿದರು.

ನಮ್ಮ ಮನಸ್ಸು ಗಟ್ಟಿಯಾಗಿದ್ದು, ಯಾವುದೇ ಕಾಯಿಲೆ ಬಂದಾಗ ಉದಾಸೀನತೆ ಒಳ್ಳೆಯದಲ್ಲ. ಕೂಡಲೇ ವೈದ್ಯರ ಬಳಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಮಾನಸಿಕ ಖಿನ್ನತೆ, ಆತಂಕ ಏನೆ ಸಮಸ್ಯೆ ಎದುರಾದರೂ ವೈದ್ಯರನ್ನು ಕಾಣಬೇಕು. ಇದರಿಂದ ಆರೋಗ್ಯ ಸುಧಾರಿಸಲಿದೆ. ಅದರ ಜೊತೆಗೆ ವಾಕಿಂಗ್, ವ್ಯಾಯಾಮ ಮಾಡುವುದರಿಂದ ಎಂಥ ಸನ್ನಿವೇಶವನ್ನೂ ಸಮರ್ಥವಾಗಿ ಎದುರಿಸಬಹುದು ಎಂದು ಸಲಹೆ ನೀಡಿದರು.

ಸ್ಕೌಟ್ಸ್ ಅಂಡ್ ಗೈಡ್ಸ್‌ನ ಕಾಂಚನಮಾಲ, ಆರ್‌ಎಸ್‌ಎಸ್‌ನ ಶೇಷಮ್ಮ ಅವರನ್ನು ಸನ್ಮಾನಿಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನೇತ್ರಾವತಿ ಮಂಜುನಾಥ್, ಆಲೂರು ಮಂಡಲ ಅಧ್ಯಕ್ಷೆ ಉಮಾ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ವಿಜಯಲಕ್ಷ್ಮಿ ಅಂಜನಪ್ಪ, ಸಕಲೇಶಪುರ ಶಾಸಕ ಸಿಮೆಂಟ್ ಮಂಜು ಪತ್ನಿ ಪ್ರತಿಭಾ ಮತ್ತಿತರರಿದ್ದರು.

# ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಆಲ್ ದಿ ಬೆಸ್ಟ್!

## ಇಂದಿನಿಂದ ಪರೀಕ್ಷೆ | ಜಿಲ್ಲಾದ್ಯಂತ 77 ಪರೀಕ್ಷಾ ಕೇಂದ್ರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಜಿಲ್ಲೆಯಲ್ಲಿ ಮಾ. 21 ರಿಂದ ಏ. 4ರ ವರೆಗೆ 77 ಕೇಂದ್ರಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದ್ದು, 10,096 ಬಾಲಕರು ಹಾಗೂ 10,248 ಬಾಲಕಿಯರು ಸೇರಿ 20,344 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.



ಆಲೂರು ತಾಲ್ಲೂಕಿನಲ್ಲಿ 5 ಪರೀಕ್ಷಾ ಕೇಂದ್ರದಲ್ಲಿ 456 ಬಾಲಕರು ಹಾಗೂ 532 ಬಾಲಕಿಯರು ಸೇರಿ 988 ವಿದ್ಯಾರ್ಥಿಗಳು, ಅರಕಲಗೂಡು ತಾಲ್ಲೂಕಿನ 9 ಕೇಂದ್ರದಲ್ಲಿ 1186 ಬಾಲಕರು ಹಾಗೂ 1155 ಬಾಲಕಿಯರು ಸೇರಿ 2341, ಅರಸೀಕೆರೆ ತಾಲ್ಲೂಕಿನ 11 ಕೇಂದ್ರದಲ್ಲಿ 1872 ಬಾಲಕರು ಹಾಗೂ 1801 ಬಾಲಕಿಯರು ಸೇರಿ 3673, ಬೇಲೂರು ತಾಲ್ಲೂಕಿನ 7 ಪರೀಕ್ಷಾ ಕೇಂದ್ರದಲ್ಲಿ 1017 ಬಾಲಕರು ಹಾಗೂ 1064 ಬಾಲಕಿಯರು ಸೇರಿ 2081 ವಿದ್ಯಾರ್ಥಿಗಳು, ಚನ್ನರಾಯಪಟ್ಟಣದ 12 ಪರೀಕ್ಷಾ ಕೇಂದ್ರದಲ್ಲಿ 1479 ಬಾಲಕರು ಹಾಗೂ 1510 ಬಾಲಕಿಯರು ಸೇರಿ 2989 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.

ಹಾಸನ ತಾಲ್ಲೂಕಿನ 15 ಪರೀಕ್ಷಾ ಕೇಂದ್ರದಲ್ಲಿ 2359 ಬಾಲಕರು ಹಾಗೂ 2382 ಬಾಲಕಿಯರು ಸೇರಿದಂತೆ ಒಟ್ಟು 4741 ವಿದ್ಯಾರ್ಥಿಗಳು, ಹೊಳೆನರಸೀಪುರ ತಾಲ್ಲೂಕಿನಲ್ಲಿ 9 ಪರೀಕ್ಷಾ ಕೇಂದ್ರದಲ್ಲಿ 1095 ಬಾಲಕರು ಹಾಗೂ 1156 ಬಾಲಕಿಯರು ಸೇರಿದಂತೆ ಒಟ್ಟು 2251 ವಿದ್ಯಾರ್ಥಿಗಳು, ಸಕಲೇಶಪುರದ 9 ಪರೀಕ್ಷಾ ಕೇಂದ್ರದಲ್ಲಿ 632 ಬಾಲಕರು ಹಾಗೂ 648 ಬಾಲಕಿಯರು ಸೇರಿ 1280 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ.

**ಬೇಲೂರು ವರದಿ :** ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ತಾಲ್ಲೂಕಿನಾದ್ಯಂತ ಸಕಲ ಸಿದ್ಧತೆ ಮಾಡಿಕೊಂಡಿದ್ದು ತಹಶೀಲ್ದಾರ್ ಎಂ. ಮಮತಾ ಗುರುವಾರ ಪರೀಕ್ಷಾ ಕೇಂದ್ರಗಳ ಪರಿಶೀಲನೆ ನಡೆಸಿದರು.

ವಿದ್ಯಾರ್ಥಿಗಳಿಗೆ ಯಾವ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು. ಪರೀಕ್ಷಾ ನೋಂದಣಿ ಸಂಖ್ಯೆ ಗೋಚರವಾಗುವ ರೀತಿ ಪ್ರದರ್ಶಿಸಬೇಕು. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉತ್ತಮ ಗಾಳಿ-ಬೆಳಕಿನ ವ್ಯವಸ್ಥೆ ಮಾಡಬೇಕು.

ಕುಡಿಯುವ ನೀರು, ಶೌಚಾಲಯ, ಸ್ವಚ್ಛತಾ ಕಾರ್ಯ ವ್ಯವಸ್ಥಿತವಾಗಿರಬೇಕು. ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದಲ್ಲಿ ಅಗತ್ಯ ಸೌಕರ್ಯ ಕಲ್ಪಿಸಬೇಕು ಎಂದು ತಹಶೀಲ್ದಾರ್ ಮಮತಾ ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಅಪಘಾತದಲ್ಲಿ ಅಪರಿಚಿತ ವ್ಯಕ್ತಿ ಸಾವು

ಸಕಲೇಶಪುರ: ತಾಲ್ಲೂಕಿನ ಬಾಗೆ ಸಮೀಪ ಬುಧವಾರ ಸಂಭವಿಸಿದ ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಅಪರಿಚಿತ ವ್ಯಕ್ತಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಬೆಳಿಗ್ಗೆ 5.30 ರಿಂದ 6ರ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದ ವ್ಯಕ್ತಿಗೆ ಅಪರಿಚಿತ ವಾಹನ ಡಿಕ್ಕಿಯಾಗಿದೆ. ಬೈಕ್ ಸವಾರ ನೀಡಿದ ಮಾಹಿತಿಯಿಂದ ಆ್ಯಂಬುಲೆನ್ಸ್ ಚಾಲಕ ಪ್ರತಾಪ್ ಸ್ಥಳಕ್ಕೆ ಧಾವಿಸಿ ಗಾಯಾಳುವನ್ನು ಕ್ರಾಫರ್ಡ್ ಆಸ್ಪತ್ರೆಗೆ ದಾಖಲಿಸಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಹಿಮ್ಸ್‌ಗೆ ಕರೆತಂದಿದ್ದರು. ಚಿಕಿತ್ಸೆ ಫಲಿಸದೆ ವ್ಯಕ್ತಿ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ಸೂಚನೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬಾಬು ಜಗಜೀವನರಾಂ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಏ. 5 ರಂದು ಬಾಬು ಜಗಜೀವನರಾಂ ಅವರ 118ನೇ ಜಯಂತಿ ಕಾರ್ಯಕ್ರಮವನ್ನು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಹಾಗೂ ಏ. 14 ರಂದು ಡಾ. ಬಿ.ಆರ್.ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಹಾಸನಾಂಬ ಕಲಾಕ್ಷೇತ್ರದಲ್ಲಿ ಆಚರಿಸಲು ಹೇಳಿದರು.

ಜಯಂತಿಯಂದು ಬಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಆವರಣದಿಂದ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆಗೆ ಚಾಲನೆ ನೀಡಲಾಗುವುದು ಹಾಗೂ ವೇದಿಕೆ ಕಾರ್ಯಕ್ರಮವನ್ನು ನಿಗದಿತ ಸ್ಥಳದಲ್ಲಿ ಬೆಳಗ್ಗೆ 11 ಗಂಟೆ ಆರಂಭಿಸಬೇಕು.

ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಬೇಕು.

ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಗುವುದು. ಉಪನ್ಯಾಸ ನೀಡಲು ವಿಷಯ ತಜ್ಞರನ್ನು ಆಹ್ವಾನಿಸಬೇಕು ಎಂದರು.

# ಹಾಸನದ ಬಹುತೇಕ ಕೆರೆಗಳು ಮಲೀನ

## ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ | ಜಿಲ್ಲಾಡಳಿತ ಅಲರ್ಟ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಲುಷಿತ ನೀರು ಸೇರುತ್ತಿರುವುದರಿಂದ ನಗರದ ಬಹುತೇಕ ಕೆರೆಗಳು ಮಲಿನಗೊಂಡಿರುವುದು ಮಾಲಿನ್ಯ ನಿಯಂತ್ರಣ ಮಂಡಳಿ ಪರಿಶೀಲನೆ ವೇಳೆ ಬೆಳಕಿಗೆ ಬಂದಿದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಫೆಬ್ರವರಿ ತಿಂಗಳಿನಲ್ಲಿ ನಗರಕ್ಕೆ ಹೊಂದಿಕೊಂಡಂತಿರುವ 26 ಕೆರೆಗಳ ನೀರಿನ ಮಾದರಿಯನ್ನು ಪರಿಶೀಲನೆಗೆ ಒಳಪಡಿಸಿದ್ದರು. ಅದರಲ್ಲಿ ನೀರಿನ ಗುಣಮಟ್ಟದ ಮಾನದಂಡಗಳ ಪ್ರಕಾರ ನಗರದಲ್ಲಿರುವ ಹಲವು ಕೆರೆಗಳ ನೀರು ಜನ, ಜಾನುವಾರುಗಳು ಕುಡಿಯಲು ಹಾಗೂ ಬಳಸಲು ಯೋಗ್ಯವಾಗಿಲ್ಲ ಎಂಬ ವರದಿ ಬಂದಿದೆ.

ವರದಿ ಬಹಿರಂಗಗೊಳ್ಳುತ್ತಿದ್ದಂತೆ ಎಚ್ಚೆತ್ತುಕೊಂಡ ಜಿಲ್ಲಾಡಳಿತ ಉದ್ದಿಮೆದಾರರು ಹಾಗೂ ಸಾರ್ವಜನಿಕರು ಯಾವುದೇ ರೀತಿಯ ಅಪಾಯಕಾರಿ ತ್ಯಾಜ್ಯವನ್ನು ಕೆರೆಗಳಿಗೆ ಬಿಡುವುದನ್ನು ನಿಷೇಧಿಸಿದೆ. ಕೆರೆಗಳಿಗೆ ತ್ಯಾಜ್ಯ ಬಿಡುತ್ತಿರುವುದು ಕಂಡುಬಂದಲ್ಲಿ ಕಾನೂನಿನಡಿಯಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿ ಸಿ. ಸತ್ಯಭಾಮ ಎಚ್ಚರಿಕೆ ನೀಡಿದ್ದಾರೆ.



### ಕೆರೆಗಳಲ್ಲಿ ತ್ಯಾಜ್ಯ ಸಂಗ್ರಹ

ನಗರದಲ್ಲಿರುವ ಕೆರೆಗಳನ್ನು ಸಂಕ್ಷಣೆ ಮಾಡುವಲ್ಲಿ ನಗರಸಭೆ, ಜಿಲ್ಲಾಡಳಿತ ವಿಫಲವಾಗಿರುವುದರಿಂದ ಕೆರೆಗಳು ತ್ಯಾಜ್ಯ ಸಂಗ್ರಹ ಘಟಕಗಳಾಗಿವೆ. ತ್ಯಾಜ್ಯ ವಸ್ತುಗಳು, ಹಳೆ ಮನೆಯ ಕಟ್ಟಡದ ತ್ಯಾಜ್ಯ ಸುರಿದು ಕೆರೆಗಳನ್ನು ಮುಚ್ಚಲಾಗುತ್ತಿದೆ. ಇದರ ಪರಿಣಾಮ ಮಳೆಗಾಲದಲ್ಲಿ ನೀರು ಕೆರೆ ಸೇರದೆ ರಸ್ತೆ ಮೇಲೆಲ್ಲ ಉಕ್ಕಿ ಹರಿಯುತ್ತಿದೆ.

ನಗರದ ಹೊರವಲಯದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿನ ಕಾರ್ಖಾನೆಗಳ ತ್ಯಾಜ್ಯ ನೀರು ನೇರವಾಗಿ ಕೆರೆಯನ್ನು ಸೇರುತ್ತಿರುವುದರಿಂದ, ಈ ನೀರನ್ನು ಜಾನುವಾರುಗಳು ಸೇವಿಸಿ ಮೃತಪಟ್ಟಿರುವ ಸಾಕಷ್ಟು ಉದಾಹರಣೆಗಳಿವೆ. ಈ ಬಗ್ಗೆ ಜಿಲ್ಲಾಧಿಕಾರಿ ಕಚೇರಿ ಎದುರು ಸ್ಥಳೀಯರು ಪ್ರತಿಭಟನೆ ನಡೆಸಿ, ಸಮಸ್ಯೆಯನ್ನು ಜಿಲ್ಲಾಡಳಿತದ ಗಮನಕ್ಕೆ ತಂದಿದ್ದರೂ ಯಾವುದೇ ಪ್ರಯೋಜನವಾಗಿರಲಿಲ್ಲ. ಇದೀಗ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪರಿಶೀಲನೆಯಿಂದ ಕೆರೆಗಳು ಕಲುಷಿತಗೊಂಡಿರುವುದು ಬಹಿರಂಗಗೊಂಡಿದೆ.

### ಕಲುಷಿತಗೊಂಡಿರುವ ಕೆರೆಗಳು

ಮಾಲಿನ್ಯ ನಿಯಂತ್ರಣ ಮಂಡಳಿ ಕೆರೆಗಳ ನೀರನ ಮಾದರಿಯನ್ನು ಸಂಗ್ರಹಿಸಿ ಪರಿಶೀಲಿಸಿದಾಗ ನೀರಿನ ಗುಣಮಟ್ಟವು ಡಿ ಮತ್ತು ಇ ವರ್ಗಕ್ಕೆ ಸೇರಿರುವುದು ಕಂಡುಬಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆ ಪ್ರಕಾರ ಡಿ ವರ್ಗಕ್ಕೆ ಸೇರಿದ ಕೆರೆಗಳೆಂದರೆ ಕೊಕ್ಕನಗಟ್ಟ ಕೆರೆ, ಸೌದರಹಳ್ಳಿ ಕೆರೆ (ಹಾಸನ ನಗರ), ಇ ವರ್ಗಕ್ಕೆ ಸೇರಿದ ಮಾಕನ್‌ಕೆರೆ, ಕಂಚನಹಳ್ಳಿಕೊಪ್ಪಲು ಕೆರೆ, ಅವಳಿಕೆರೆ (ಹಾಸನ ನಗರ) ಸೇರಿ ಇತರೆ ಕೆರೆಗಳು. ಇದರಲ್ಲಿ ಡಿ ವರ್ಗಕ್ಕೆ ಸೇರಿರುವ ಕೆರೆಗಳ ನೀರನ್ನು ಜನ, ಜಾನುವಾರುಗಳು ಕುಡಿಯಲು ಹಾಗು ಬಳಸಲು ಯೋಗ್ಯವಾಗಿಲ್ಲ ಎಂಬುದು ದೃಢಪಟ್ಟಿದೆ.

ಇ ವರ್ಗಕ್ಕೆ ಸೇರಿರುವ ಕೆರೆಗಳ ಜಲಮೂಲದ ನೀರನ್ನು ಕುಡಿಯಲು, ದಿನ ನಿತ್ಯಕ್ಕೆ ಬಳಸಲು ಮತ್ತು ಮೀನುಗಾರಿಕೆ ಮಾಡಲು ಯೋಗ್ಯವಾಗಿಲ್ಲ. ಆದರೆ, ಕೈಗಾರಿಕೆಗಳಲ್ಲಿ ತಂಪಾಗಿಸುವಿಕೆ ಮತ್ತು ವ್ಯವಸಾಯಕ್ಕೆ ಬಳಸಬಹುದಾಗಿದೆ ಎಂದು ತಿಳಿಸಿದ್ದಾರೆ.

ಹೀಗಾಗಿ ಕೆರೆಗಳಿಗೆ ತ್ಯಾಜ್ಯ, ಕೊಳಚೆ ನೀರು ಬಿಡದಂತೆ ನಿಷೇಧಿಸಲಾಗಿದೆ. ಆದರೆ, ಈ ನಿಯಮ ಎಷ್ಟರ ಮಟ್ಟಿಗೆ ಪಾಲನೆಯಾಗಲಿದೆ ಎಂಬುದೇ ಕುತೂಹಲಕಾರಿಯಾಗಿದೆ.


### ಕೆರೆಗಳೇ ಕಣ್ಮರೆ

ನಗರದಲ್ಲಿ ಈ ಹಿಂದೆ ಇದ್ದ ಬಹುತೇಕ ಕೆರೆಗಳು ಈಗ ಕಣ್ಮರೆಯಾಗಿವೆ. ಉಳಿದಿರುವ ಕೆಲವೇ ಕೆರೆಗಳು ಹೂಳು ತುಂಬಿಕೊಂಡು ಅಸ್ತಿತ್ವ ಕಳೆದುಕೊಂಡಿವೆ. ಅಂತರ್ಜಲ ವೃದ್ಧಿಗೆ ಮೂಲವಾಗಿದ್ದ ಕೆರೆಗಳು ಪ್ರಸ್ತುತ ಚರಂಡಿ, ತ್ಯಾಜ್ಯ ನೀರಿನ ಸಂಗ್ರಹಣಾ ಘಟಕಗಳಾಗಿವೆ. ಇದು ಮಾತ್ರವಲ್ಲದೇ ಬಹುತೇಕ ಕೆರೆಗಳು ಒತ್ತುವರಿಯಾಗಿವೆ. ಹೆಚ್ಚು ವಿಸ್ತೀರ್ಣ ಹೊಂದಿರುವ ಹೊಣಸಿನಕೆರೆಯಲ್ಲಿ ನೀರಿಗಿಂತ ಹೆಚ್ಚಾಗಿ ತ್ಯಾಜ್ಯ, ಹೂಳೇ ತುಂಬಿಕೊಂಡಿದೆ. ನಗರದ ಹೃದಯ ಭಾಗದಲ್ಲಿರುವ ಚನ್ನಪಟ್ಟಣ ಕೆರೆ ಎಲ್ಲಿದೆ ಎಂದು ಹುಡುಕುವಂತಾಗಿದೆ.

# ಕರವೇ ತಾಲ್ಲೂಕು ಪದಾಧಿಕಾರಿಗಳ ಪದಗ್ರಹಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷರಾಗಿ ಎ.ಜಿ. ಕಿರಣ್‌ಕುಮಾರ್ ಹಾಗೂ ಉಪಾಧ್ಯಕ್ಷರಾಗಿ ಹೇಮಂತ್‌ಕುಮಾರ್ ಅವರನ್ನು ನೇಮಕ ಮಾಡಲಾಗಿದೆ ಎಂದು ಕರವೇ ಜಿಲ್ಲಾಧ್ಯಕ್ಷ ಸಿ.ಡಿ. ಮನುಕುಮಾರ್ ಹೇಳಿದರು.



ನಗರದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಅಧ್ಯಕ್ಷರ ಪದಗ್ರಹಣ ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ಕನ್ನಡ ನೆಲ, ಜಲ, ಕನ್ನಡಿಗರಿಗೆ ಉದ್ಯೋಗ ಸೇರಿದಂತೆ ನಾಡಿಗೆ ಅನ್ಯಾಯವಾದಾಗ ಹೋರಾಟ ಮಾಡಿ ಸರ್ಕಾರವನ್ನು ಸರಿಯಾದ ದಾರಿಗೆ ತರುವ ಕರ್ನಾಟಕ ರಕ್ಷಣಾ ವೇದಿಕೆ ಹಲವು ವರ್ಷಗಳಿಂದ ತನ್ನ ಹೋರಾಟದ ಮೂಲಕ ಮನೆ ಮಾತಾಗಿದೆ ಎಂದರು.

ರಾಜ್ಯಾಧ್ಯಕ್ಷ ಟಿ.ಎ. ನಾರಾಯಣ ಗೌಡರ ನೇತೃತ್ವದ ರಕ್ಷಣಾ ವೇದಿಕೆ ರಾಜ್ಯದ ದಕ್ಷಿಣದಿಂದ ಉತ್ತರದವರೆಗೂ ತನ್ನದೇ ಆದ ಪಡೆಯನ್ನು ಕಟ್ಟಿ ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಹೋರಾಟ ನಡೆಸಿದೆ ಎಂದರು.

ಕೇವಲ ರಾಜ್ಯದ ಸಮಸ್ಯೆ ಅಲ್ಲದೇ ರೈಲ್ವೆ ನೇಮಕಾತಿಯಲ್ಲಿ ಕನ್ನಡಿಗರಿಗೆ ಒತ್ತು ನೀಡುವುದು, ಹಲವು ಪರೀಕ್ಷೆಗಳನ್ನು ಕನ್ನಡದಲ್ಲಿ ಮಾಡುವಂತೆ, ಕನ್ನಡದಲ್ಲಿ ನಾಮಫಲಕ ಅಳವಡಿಕೆ, ಗಡಿ ಸಮಸ್ಯೆ, ಖಾಸಗಿ ಕೈಗಾರಿಕೆಯಲ್ಲಿ ಕನ್ನಡಿಗರಿಗೆ ಉದ್ಯೋಗ, ಎಂಇಎಸ್‌ನ ಪುಂಡಾಟಿಕೆಗೆ ಬುದ್ಧಿ ಹೇಳುವ ಕೆಲಸವನ್ನು ಮಾಡಿ ಕನ್ನಡ ನಾಡನ್ನು, ಕನ್ನಡಿಗರ ರಕ್ಷಣೆಯಲ್ಲಿ ಕರವೇ ಶ್ರಮಿಸುತ್ತಿದೆ ಎಂದರು.

ನೂತನ ತಾಲ್ಲೂಕು ಅಧ್ಯಕ್ಷ ಎ.ಜಿ. ಕಿರಣ್‌ಕುಮಾರ್ ಮಾತನಾಡಿ, ತಾಲ್ಲೂಕಿನಲ್ಲಿ 25 ವರ್ಷಗಳಿಂದ ರಕ್ಷಣಾ ವೇದಿಕೆ ಸ್ಥಾಪನೆಗೊಂಡು ಹಲವು ಹೋರಾಟಗಳನ್ನು ಮಾಡುತ್ತ ಬಂದಿದೆ. ಹೇಮಾವತಿ ನದಿ ನೀರಿಗಾಗಿ, ರಸ್ತೆಗಳ ಸಮಸ್ಯೆ, ಶಾಲೆಗಳ ದುರಸ್ತಿ, ವಿದ್ಯಾರ್ಥಿಗಳಿಗೆ ಬಸ್ ಸೌಲಭ್ಯ ಸೇರಿದಂತೆ ಹಲವು ಹೋರಾಟ ಮಾಡಿದೆ ಎಂದರು.

ನಗರಸಭೆ ಮಾಜಿ ಅಧ್ಯಕ್ಷ ಸಿ. ಗಿರೀಶ್, ರಮೇಶ್ ನಾಯ್ಡು, ಜಿಲ್ಲಾ ಉಪಾಧ್ಯಕ್ಷ ಹೇಮಂತ್ ಕುಮಾರ್, ತುಳಸಿದಾಸ್, ತಾಲ್ಲೂಕು ಗೌರವಾಧ್ಯಕ್ಷ ಲಕ್ಷ್ಮೀಶ್, ರಮೇಶ್, ಎ.ಬಿ. ಸಂತೋಷ್, ಗಂಗಾಧರ್, ಕಮಲಮ್ಮ, ರವಿಶಂಕರ್, ರಘು, ರುಕ್ಮಿಣಿ ಜಯಕುಮಾರ್, ದಿಲೀಪ್ ಕುಮಾರ್, ಪ್ರಸನ್ನ, ಯುವ ಘಟಕದ ಅಧ್ಯಕ್ಷ ರಕ್ಷಿತ್, ದಿವಾಕರ್, ಪರಮೇಶ್, ಅರುಣ್, ಗಂಡಸಿ ಶಶಿಧರ್ ಉಪಸ್ಥಿತರಿದ್ದರು.

# ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾದ ವ್ಯಕ್ತಿ

ಬೇಲೂರು: ಮನೆಯ ಮೇಲಿನಿಂದ ಕೆಳಗೆ ಬಿದ್ದ ಕಾರ್ಮಿಕ ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾಗಿರುವ ಘಟನೆ ತಾಲ್ಲೂಕಿನ ದೇವರಾಜಪುರ ಗ್ರಾಮದಲ್ಲಿ ಇತ್ತೀಚೆಗೆ ನಡೆದಿದೆ. ಗ್ರಾಮದ ಧರ್ಮೇಂದ್ರ, ಗಾಯಾಳು. ಗುತ್ತಿಗೆದಾರ ಶ್ರೀನಿವಾಸ ಅವರ ಜೊತೆ ಕೆಲಸ ಮಾಡಿಕೊಂಡಿದ್ದ ಧರ್ಮೇಂದ್ರ, ಮಾ. 1 ರಂದು ನಿರ್ಮಾಣ ಹಂತದ ಮನೆಯ ಮೇಲೆ ಹತ್ತಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ಕೆಳಗೆ ಬಿದ್ದಿದ್ದಾರೆ. ಸುರಕ್ಷಿತ ಕ್ರಮ ಕೈಗೊಳ್ಳದೆ ಇರುವುದು ಅವಘಡಕ್ಕೆ ಕಾರಣ ಎನ್ನಲಾಗಿದೆ. ಬೆನ್ನು ಮೂಳೆ, ಎದೆ, ಪಕ್ಕೆ ಹಾಗು ತಲೆಗೆ ಬಲವಾದ ಪೆಟ್ಟಾಗಿ ಶಾಶ್ವತ ಅಂಗವೈಕಲ್ಯಕ್ಕೆ ತುತ್ತಾಗಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಲ್ಲಿಪಟ್ಟಣ ಪಿಕೆಪಿಎಸ್‌ಗೆ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ



ಅರಕಲಗೂಡು: ತಾಲ್ಲೂಕಿನ ಮಲ್ಲಿಪಟ್ಟಣ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ.ಎಂ. ವಿಶ್ವನಾಥ್ ಹಾಗೂ ಉಪಾಧ್ಯಕ್ಷರಾಗಿ ಬಿ.ಆರ್. ಮೀನಾಕ್ಷಿ ಆಯ್ಕೆಯಾದರು.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಎಂ.ಎಂ. ವಿಶ್ವನಾಥ್ 8 ಮತ ಪಡೆದರೆ, ಪ್ರತಿಸ್ಪರ್ಧಿ ಎಂ.ಆರ್. ಮಂಜುನಾಥ್ 4 ಮತ ಪಡೆದರು. ಉಪಾಧ್ಯಕ್ಷ ಸ್ಥಾನಕ್ಕೆ ಬಿ.ಆರ್. ಮೀನಾಕ್ಷಿ ಅವಿರೋಧ ಆಯ್ಕೆಯಾದರು. ಸಹಕಾರಿ ಇಲಾಖೆ ಅಧಿಕಾರಿ ಬಿ.ಎಸ್. ಪುನೀತ್ ಕುಮಾರ್ ಚುನಾವಣಾ ಕಾರ್ಯ ನಿರ್ವಹಿಸಿದರು.

ನೂತನ ಅಧ್ಯಕ್ಷ ವಿಶ್ವನಾಥ ಮಾತನಾಡಿ, ಅಧಿಕಾರ ಶಾಶ್ವತವಲ್ಲ ಸಹಕಾರ ಸಂಘದ ಅಭಿವೃದ್ಧಿಯೇ ಶ್ವಾಶತ. ಈ ದಿಶೆಯಲ್ಲಿ ಸಂಘದ ನಿರ್ದೇಶಕರ ಸಹಕಾರ ಅತ್ಯಾವಶ್ಯಕವಾಗಿದ್ದು ಒಮ್ಮತದ ಅಭಿಪ್ರಾಯದೊಂದಿಗೆ ಅಭಿವೃದ್ಧಿ ಪಡಿಸೋಣ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಸಹಕರಿಸಿದ ಸದಸ್ಯರು ಹಾಗೂ ನಿರ್ದೇಶಕರಿಗೆ ಅಭಿನಂದನೆ ತಿಳಿಸಿದರು.

ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಕೆ. ಸತೀಶ್, ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶೃತಿ, ಸಂಘದ ನಿರ್ದೇಶಕರಾದ ಹುಲ್ಲಮನೆ ಮಂಜುನಾಥ , ಬಿ.ಜೆ. ಚಂದ್ರಶೇಖರ್, ಅರುಣಕುಮಾರ್, ಸಂಜಯ್, ಗಾಯತ್ರಿ, ಧರ್ಮವತಿ, ಎ.ಸಿ. ಸುರೇಶ್, ಅಕ್ಷಯ್ ಉಪಸ್ಥಿತರಿದ್ದರು.

# ಗೃಹಭಂಗದ ನಂಜಮ್ಮ ಮಹಿಳೆಯರಿಗೆ ಆದರ್ಶವಾಗಲಿ

## ಎಸ್.ಎಲ್. ಭೈರಪ್ಪ ಕಾದಂಬರಿ ಕೊಂಡಾಡಿದ ನಟಿ ಮಾಳವಿಕಾ | ಮಹಿಳಾ ದಿನಚಾರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸಾಹಿತಿ ಡಾ. ಎಸ್.ಎಲ್. ಭೈರಪ್ಪ ಅವರ ಗೃಹಭಂಗ ಕಾದಂಬರಿಯಲ್ಲಿನ ನಂಜಮ್ಮ ಅನುಭವಿಸುವ ಕಷ್ಟಗಳನ್ನು ನಾವು ಅನುಭವಿಸುತ್ತಿಲ್ಲ. ಆದರೂ ಸಾಕಷ್ಟು ಮಹಿಳೆಯರು ಆತ್ಮಸ್ಥೈರ್ಯ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದು ತರವಲ್ಲ ಎಂದು ಚಿತ್ರನಟಿ ಮಾಳವಿಕಾ ಅವಿನಾಶ್ ತಿಳಿಸಿದರು.

ಪಟ್ಟಣದ ಖಾಸಗಿ ಸಮುದಾಯ ಭವನದಲ್ಲಿ ಹೇಮಾವತಿ ಒಕ್ಕಲಿಗ ಮಹಿಳಾ ಮಂಡಳಿಯಿಂದ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಸಾಹಿತಿ ಎಸ್.ಎಲ್.ಭೈರಪ್ಪ ಅವರ ಜೀವನಕಥೆ ಎಂದು ಹೇಳುವ ಗೃಹಭಂಗದಲ್ಲಿ ಒಂದು ಹೊತ್ತು ಊಟಕ್ಕೆ ಯಾವ ರೀತಿಯಲ್ಲಿ ಕಷ್ಟ ಪಡುತ್ತಿದ್ದರು. ಪ್ರತಿ ಮನೆಯ ಮಹಿಳೆಯರು ತಮ್ಮ ಮಕ್ಕಳಿಗಾಗಿ ತ್ಯಾಗ ಮಾಡುತ್ತಿದ್ದನ್ನು ಹೇಳಿದ್ದಾರೆ. ಈ ಮಣ್ಣಿನಲ್ಲಿ ಜನ್ಮ ಪಡೆದ ಭೈರಪ್ಪ ಇಲ್ಲಿನ ಜನರ ಕಷ್ಟಗಳನ್ನು ಎಳೆ ಎಳೆಯಾಗಿ ಬಿಡಿಸಿದ್ದಾರೆ. ಇಂತಹ ಕಾದಂಬರಿಯನ್ನು ಈ ತಾಲ್ಲೂಕಿನವರು ಮಾತ್ರವಲ್ಲ ದೇಶದ ಪ್ರತಿಯೊಬ್ಬರೂ ಓದಬೇಕು, ಆಗ ತಿಳಿಯುತ್ತದೆ ನಾವು ಕಷ್ಟ ಪಡುತ್ತಿರುವುದು ಏನೇನು ಅಲ್ಲ ಎನ್ನುವುದು, ಅಂದು ಊಟಕ್ಕಾಗಿ ಕಷ್ಟ ಪಡುತ್ತಿದ್ದರು ಇಂದು ಎಲ್ಲವೂ ಸಿಗುತ್ತಿದೆ. ಆದರೆ ನಮ್ಮಗಳಲ್ಲಿ ಹೃದಯ ಶ್ರೀಮಂತಿಕೆ ಕಡಿಮೆಯಾಗಿದೆ ಎಂದರು.



ಜೀವನ ನಡೆಸುವ ಬಗ್ಗೆ ಮಹಾನಗರದಲ್ಲಿ ಸಾಕಷ್ಟು ಮಂದಿ ಮಾರ್ಗದರ್ಶನ ನೀಡುತ್ತಾರೆ. ಅದನ್ನು ಹಣಕೊಟ್ಟು ಕೇಳುತ್ತಾರೆ. ಇದರ ಬದಲಾಗಿ ಭಗವದ್ಗೀತೆ ಓದಿದರೆ ಯಾವ ರೀತಿಯಲ್ಲಿ ಬದುಕಬೇಕು ಎನ್ನುವುದು ತಿಳಿಯುತ್ತದೆ. ಭಗವಾನ್ ಶ್ರೀಕೃಷ್ಣನಿಗಿಂತ ಮಾರ್ಗದರ್ಶನಯಾರು ನೀಡಲಾರರು, ಆದರೆ ನಾವು ನಮ್ಮ ಪವಿತ್ರ ಗ್ರಂಥ ಭಗವದ್ಗೀತೆಯನ್ನು ಓದಲು ಸಮಯ ಕೊಡುತ್ತಿಲ್ಲ. ಹಾಗಾಗಿ ನಮಗೆ ಜೀವನವನ್ನು ಯಾವ ರೀತಿಯಲ್ಲಿ ನಡೆಸಬೇಕು ಎನ್ನುವುದು ಅರ್ಥವಾಗುತ್ತಿಲ್ಲ ಎಂದ ಅವರು, ಇತ್ತೀಚಿನ ದಿನಗಳಲ್ಲಿ ವಿವಾಹವಾಗಿ ವಾರಕ್ಕೆ ವಿಚ್ಛೇದನ ನೀಡುತ್ತಾರೆ. ಇಂತಹ ಪ್ರಸಂಗಗಳು ಬರಬಾರದು ಎಂದರೆ ಸನಾತನ ಧರ್ಮದ ಪವಿತ್ರ ಗ್ರಂಥ ರಾಮಾಯಣವನ್ನು ಓದಿದರೆ ಅಲ್ಲಿ ಸೀತೆ ಪಟ್ಟ ಕಷ್ಟದ ಮುಂದೆ ನಮ್ಮ ಕಷ್ಟ ಶೂನ್ಯ. ಸೀತೆ ನಡೆದ ಹಾದಿಯನ್ನು ಶೇ.1 ರಷ್ಟು ಮಾತ್ರ ಮಹಿಳೆಯರು ಅನುಸರಿಸಿದರೆ ದೇಶದ ಪ್ರತಿ ಮನೆ ನಂದಾಗೋಕುಲವಾಗಲಿದೆ ಎಂದು ಹೇಳಿದರು.

ವಿದೇಶಿ ವ್ಯಾಮೋಹಕ್ಕೆ ಮಾರುಹೋಗಿ ಮಹಿಳೆಯರನ್ನು ಆಗೌರವದಿಂದ ನೋಡಲಾಗುತ್ತಿದೆ. ಭಾರತೀಯತೆ ಪ್ರತಿ ಮಹಿಳೆಗೆ ಗೌರವ ಕೊಡುವುದನ್ನು ಕಲಿಸುತ್ತದೆ ಅದೇ ಪರಕೀಯರು ಮಹಿಳೆಯನ್ನು ಒಂದು ಭೋಗದ ವಸ್ತುವಾಗಿ ನೋಡುತ್ತಾರೆ, ಇಲ್ಲಿ ನದಿ, ಭೂಮಿ, ಪರಿಸರ ಹೀಗೆ ಪ್ರತಿಯೊಂದನ್ನು ಮಹಿಳೆಯ ಹೆಸರಿನಲ್ಲಿ ಕರೆಯುತ್ತಾರೆ ಅಂತಹ ಪವಿತ್ರವಾದ ಈ ನೆಲದ ಸಂಸ್ಕಾರವನ್ನು ಮರೆಯಬಾರದು, ವಿದೇಶಿ ವ್ಯಾಮೋಹಕ್ಕೆ ಯಾರು ಮಾರುಹೋಗದೆ ನಮ್ಮ ಸಂಸ್ಕಾರವನ್ನು ಮಕ್ಕಳಿಗೆ ಕಲಿಸೋಣ ಎಂದರು.

ಮಹಿಳೆಯರಲ್ಲಿ ಅಗಾಧ ಶಕ್ತಿ ಇದೆ. ಅದನ್ನು ಅರಿಯದೆ ನಾವು ಗೆರೆಹಾಕಿಕೊಂಡು ಕೂರುತ್ತಿದ್ದೇವೆ, ಯಾರೂ ಸಹ ನೀನು ಗೃಹಿಣಿಯಾಗು ಎಂದು ಹೇಳುತ್ತಿಲ್ಲ ಬಲವಂತ ಮಾಡುತ್ತಿಲ್ಲ ಆದರೂ ನಾವೇ ಗೃಹಿಣಿಯ ಪಾತ್ರವನ್ನು ಆಯ್ಕೆ ಮಾಡಿಕೊಂಡು ಕುಟುಂಬ ನಿಭಾಯಿಸುತ್ತಿದ್ದೇವೆ, ನಮ್ಮ ಮೌಲ್ಯವನ್ನು ಅರಿತು ಸಾಮರ್ಥ್ಯಕ್ಕೆ ತಕ್ಕ ಕೆಲಸ ಮಾಡಬೇಕು. ಸಮಾಜಕ್ಕೆ ಮಾದರಿಯಾಗಬೇಕು ಎಂದು ಕಿವಿ ಮಾತು ಹೇಳಿದರು.

ದೇಶ ರಕ್ಷಣೆಯಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದೆ ಒನಕೆ ಓಬವ್ವ, ಝಾನ್ಸಿ ರಾಣಿ ಲಕ್ಷ್ಮಿಬಾಯಿ, ಕಿತ್ತೂರರಾಣಿ ಚನ್ನಮ್ಮ ಅವರು ತಮ್ಮ ನಾಡ ರಕ್ಷಣೆಗಾಗಿ ಪುರಷರೊಂದಿಗೆ ಹೋರಾಟ ಮಾಡಿದ್ದಾರೆ. ಇದೇ ಹಾದಿಯಲ್ಲಿ ನವಯುಗದ ಮಹಿಳೆಯರು ಸಾಗಬೇಕು ಎಂದು ಪ್ರಧಾನಿ ಮೋದಿ ವಾಯುಪಡೆ, ನೌಕಾಪಡೆ ಹಾಗೂ ಸೇನೆಯನ್ನು ಮುನ್ನಡೆಸಲು ಅವಕಾಶ ನೀಡಿದ್ದು ಅದನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ ಎಂದರು.

ಚಿತ್ರನಟಿ ಸೋನುಗೌಡ ಮಾತನಾಡಿ, ತಾಯಿ ಎಲ್ಲವನ್ನು ಕೊಡುತ್ತಾಳೆ ಆಕೆ ತ್ಯಾಗ ಹಾಗೂ ಬಲಿದಾನಕ್ಕೂ ಸಿದ್ಧವಾಗಿರುತ್ತಾರೆ ಇಂತಹ ತಾಯಿಯಾಗಿ ಜನ್ಮ ಪಡೆದ ನಾವುಗಳು ಪುಣ್ಯವಂತರು, ಯಾರೀಗೂ ಹೆಣ್ಣು ಮಗುವಾದರೆ ಅಂಜಿಕೆ ಬೇಡ ಪ್ರತಿ ಮನೆಯ ಕಷ್ಟಕ್ಕೆ ಮರುಗುವುದು ಹೆಣ್ಣು, ಹೆಣ್ಣು ಹೆಣ್ಣಿಗೆ ಶತ್ರು ಎನ್ನುವ ಕಾಲ ಬದಲಾಗಿದೆ ಹೆಣ್ಣು ಜೀವನ ಮಾರ್ಗದರ್ಶಕಿಯಾಗಿ ಬದಲಾಗಿದ್ದಾಳೆ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಸಿ.ಕೆ.ಕುಸುಮಾರಾಣಿ ಮಾತನಾಡಿ, ಮಹಿಳೆ ದೇಶದಲ್ಲಿ ಎತ್ತರಕ್ಕೆ ಬೆಳೆದಿದ್ದಾರೆ, ನಾವು ಹಕ್ಕುಗಳನ್ನು ಕೇಳುವುದಕ್ಕೆ ಮಾತ್ರ ಸೀಮಿತವಾಗದೆ ಕರ್ತವ್ಯವನ್ನು ಮಾಡಬೇಕು, ಪ್ರತಿ ಮನೆಯಲ್ಲಿ ಮೊದಲು ಮಹಿಳೆ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು, ನಿಮ್ಮ ಆರೋಗ್ಯ ಕೆಟ್ಟರೆ ಇಡೀ ಕುಟುಂಬದ ಆನಾರೋಗ್ಯದಿಂದ ಬಳಲುತ್ತದೆ ಎನ್ನುವುದನ್ನು ಮರೆಯಬಾರದು ಎಂದರು.

ಹೇಮಾವತಿ ಮಹಿಳಾ ಮಂಡಳಿ ಗೌರವ ಅಧ್ಯಕ್ಷೆ ಕುಸುಮಾ ಬಾಲಕೃಷ್ಣ, ಅಧ್ಯಕ್ಷೆ ಮೀನಾ ರಾಜಶೇಖರ್, ಖಜಾಂಚಿ ಮಮತಾ ಮಂಜೇಗೌಡ, ನಿರ್ದೇಶಕರಾದ ಗಿತಾಶ್ರೀ, ಜಯಮ್ಮ ಮಂಜಪ್ಪ, ನಿರ್ಮಲಾ ಪ್ರಕಾಶ್, ಹೇಮಾ ಶಂಕರ್, ಭಾಗ್ಯ ಚಂದ್ರಪ್ಪ, ವೀಣಾ ಮಂಜಣ್ಣ, ನಾಗರತ್ನ ಶೇಖರ್, ಕಲ್ಪನಾ ಸತ್ತಿಗೌಡ ಇತರರಿದ್ದರು.

# ಮೂವರಿಗೆ ಶಿಕ್ಷೆ ವಿಧಿಸಿದ ಜೆಎಂಎಫ್‌ಸಿ ನ್ಯಾಯಾಲಯ

ಅರಸೀಕೆರೆ: ತಾಲ್ಲೂಕಿನ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಅಪಘಾತ ಪ್ರಕರಣ ಸಂಬಂಧ ಜೆಎಂಎಫ್‌ಸಿ ನ್ಯಾಯಾಲಯ ಮೂವರಿಗೆ ಶಿಕ್ಷೆ ವಿಧಿಸಿದೆ.

2020ರ ಜುಲೈ 6 ರಂದು ನೇರ್ಲಿಗೆ-ನಿಡಘಟ್ಟ ರಸ್ತೆಯಲ್ಲಿ ಸಂಭವಿಸಿದ ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ವ್ಯಕ್ತಿ ಸಾವಿಗೆ ಕಾರಣರಾದ ಆರೋಪಿಗೆ ಶಿಕ್ಷೆ ಪ್ರಕಟವಾಗಿದೆ. ಜಾವಗಲ್ ಹೋಬಳಿ ನೇರ್ಲಿಗೆ ಗ್ರಾಮದ ಪ್ರಸನ್ನ ಹಾಗೂ ಅವರ ತಂದೆ ಕೃಷ್ಣಮೂರ್ತಿ ಬೈಕ್‌ನಲ್ಲಿ ಜಾವಗಲ್‌ನಿಂದ ನೇರ್ಲಿಗೆ ಗ್ರಾಮಕ್ಕೆ ಬರುತ್ತಿದ್ದಾಗ ಎದುರುಗಡೆಯಿಂದ ಬೈಕ್‌ನಲ್ಲಿ ಬಂದ ದಾವಣಗೆರೆ ಜಿಲ್ಲೆ ದೇವನಾಯಕನಹಳ್ಳಿ ಗ್ರಾಮದ ವೀರೇಶ್ ಡಿಕ್ಕಿ ಮಾಡಿದ್ದ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಕೃಷ್ಣಮೂರ್ತಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದರು. ಜಾವಗಲ್ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣ ವಿಚಾರಣೆ ನಡೆಸಿದ ನ್ಯಾಯಾಧೀಶರು ಆರೋಪಿಗೆ 1 ಸಾವಿರ ರೂ. ದಂಡ ವಿಧಿಸಿದ್ದು ತಪ್ಪಿದರೆ ಏಳು ದಿನಗಳ ಕಾರಾಗೃಹ ಶಿಕ್ಷೆ ವಿಧಿಸಿದ್ದಾರೆ.


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಕಾರು ಚಾಲಕನಿಗೆ ದಂಡ: 2013ರ ಅ. 8 ರಂದು ಬಾರೇಹಳ್ಳಿ ಗೇಟ್ ಸಮೀಪ ಕಾರು ಡಿಕ್ಕಿಯಾಗಿ ರಘು ಎಂಬ ಬೈಕ್ ಸವಾರ ಮೃತಪಟ್ಟಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಗಂಡಸಿ ಠಾಣೆ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣ ವಿಚಾರಣೆ ನಡೆಸಿದ ಅರಸೀಕೆರೆ ಜೆಎಂಎಫ್‌ಸಿ ನ್ಯಾಯಾಧೀಶರಾದ ಪಿ. ಮಮತಾ ಅವರು, ಕಾರು ಚಾಲಕ ರಘು ಅವರಿಗೆ 1,000 ರೂ. ದಂಡ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ದಂಡ ಕಟ್ಟಲು ವಿಫಲರಾದರೆ ಏಳು ದಿನಗಳ ವರೆಗೆ ಸಾಧಾರಣ ಕಾರಾಗೃಹ ಶಿಕ್ಷೆಗೆ ಗುರಿಪಡಿಸಲಾಗುವುದು. ಸರ್ಕಾರದ ಪರವಾಗಿ ಎಸ್. ಶಶಾಂಕ್ ವಾದ ಮಂಡಿಸಿದ್ದರು. ಮತ್ತೊಂದು ಪ್ರಕರಣದಲ್ಲಿ 2020ರ ಡಿ. 4 ರಂದು ನಗರದ ಎಪಿಎಂಸಿ ಗೇಟ್ ಮುಂಭಾಗ ಸಂಭವಿಸಿದ ಕಾರು ಹಾಗು ಬೈಕ್ ಅಪಘಾತದಲ್ಲಿ ಬಾಲಕ ಮೃತಪಟ್ಟ ಪ್ರಕರಣ ಸಂಬಂಧ ಕಾರು ಚಾಲಕನಿಗೆ 1 ಸಾವಿರ ರೂ. ದಂಡ ವಿಧಿಸಲಾಗಿದೆ.

ಅಂಚೆಕೊಪ್ಪಲಿನಲ್ಲಿ ನಿವಾಸಿ ಯೋಗೇಶ್ ಅವರ ಪುತ್ರ ಧನ್ವಿತ್ ಅಪಘಾತದಲ್ಲಿ ಮೃತಪಟ್ಟಿದ್ದ. ಪ್ರಕರಣ ವಿಚಾರಣೆ ನಡೆಸಿದ ಜೆಎಂಎಫ್‌ಸಿ ನ್ಯಾಯಾಧೀಶ ಕಿರಣ್ ಕುಮಾರ್ ಡಿ. ವಡಿಗೇರಿ ಅವರು ಆರೋಪಿ ಹರೀಶ್ ಎಂಬಾತನಿಗೆ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ಸರ್ಕಾರದ ಪರವಾಗಿ ವಿರೂಪಾಕ್ಷ ವಾದ ಮಂಡಿಸಿದ್ದರು.

# ಸಾರ್ವಜನಿಕ ಆಸ್ಪತ್ರೆಯಲ್ಲಿ ಇಂದು ಕಾರ್ಯಾಗಾರ

ಹೊಳೆನರಸೀಪುರ: ಗರ್ಭಕೋಶ ಶಸ್ತ್ರ ಚಿಕಿತ್ಸೆಗೆ ಲ್ಯಾಪ್ರೋಸ್ಕೋಪಿಕಲ್ ತಂತ್ರಜ್ಞಾನವನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆ ಅಳವಡಿಸಿಕೊಂಡಿದ್ದು ಗರ್ಭಕೋಶ ತೆಗೆಯಲು ಉದರ ಕೊಯ್ಯಬೇಕಿಲ್ಲ. ಸಣ್ಣ ರಂಧ್ರ ಮಾಡಿ ಯಶಸ್ವಿ ಚಿಕಿತ್ಸೆ ಮಾಡುವ ವಿಧಾನವನ್ನು ಕಂಡುಕೊಳ್ಳಲಾಗಿದೆ.


ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಜಿಲ್ಲಾ ಹಾಗೂ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿರುವ ಈ ಚಿಕಿತ್ಸೆ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಾಗುತ್ತಿರುವುದು ಖುಷಿಯ ವಿಚಾರ. ಈ ಸಂಬಂದ ಮಾ. 21 ರಂದು ನ್ಯಾಷನಲ್ ಯೂರೋ ಗೈನಿಕಾಲಜಿ ವಿಶೇಷ ಕಾರ್ಯಾಗಾರವನ್ನು ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಅದಕ್ಕಾಗಿ ಚೆನ್ನೈ ಮತ್ತು ಬೆಂಗಳೂರಿನ ನುರಿತ ತಜ್ಞರ ತಂಡ ಆಗಮಿಸಲಿದೆ. ಯೂರೋ ಗೈನಿಕಾಲಜಿ ತಜ್ಞರು ಒಂದೇ ದಿನ 7 ರಿಂದ 8 ಲ್ಯಾಪ್ರೋಸ್ಕೋಪಿಕಲ್ ಸರ್ಜರಿಯ ಪ್ರಾತ್ರ್ಯಕ್ಷಿಕೆ ನೀಡಲಿದ್ದಾರೆ. ಸ್ಥಳೀಯ ಮತ್ತು ರಾಜ್ಯದ ನಾನಾ ಆಸ್ಪತ್ರೆಗಳ ವೈದ್ಯರು ತರಬೇತಿ ಪಡೆದುಕೊಳ್ಳಲು ಭೇಟಿ ನೀಡುವರು.

ಪ್ರಾತ್ಯಕ್ಷಿಕೆಯ ಲೈವ್ ವೀಕ್ಷಣೆಗೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಶಸ್ತ್ರ ಚಿಕಿತ್ಸೆ ಕೊಠಡಿಯ ಹೊರಗೆ ದೃಶ್ಯಗೊಳಿಸಲಾಗುವ ಮತ್ತು ಶಸ್ತ್ರಚಿಕಿತ್ಸಾ ನೂತನ ಮಾದರಿಯನ್ನು ವಿವರಿಸಲಾಗುತ್ತದೆ. ಜೊತೆಗೆ ಶಸ್ತ್ರಚಿಕಿತ್ಸೆ ಕುರಿತು ತರಬೇತಿ ಹೊಂದಲು ಬಂದಿರುವ ವೈದ್ಯರ ಸಂದೇಹವನ್ನು ಪರಿಹರಿಸಲಾಗುತ್ತದೆ. ಅದಕ್ಕೆ ತಕ್ಕಂತೆ ಶಸ್ತ್ರಚಿಕಿತ್ಸೆ ಅಗತ್ಯ ಇರುವ ರೋಗಿಗಳನ್ನು ಈಗಾಗಲೇ ಒಳ ರೋಗಿಗಳಾಗಿ ದಾಖಲಿಸಿಕೊಳ್ಳಲಾಗಿದೆ. ಅದರಿಂದ ಸ್ಥಳೀಯ ಆಸ್ಪತ್ರೆ ಸೇರಿ ಇನ್ನಿತರೆ ಸ್ತ್ರೀರೋಗ ತಜ್ಞರು ತರಬೇತಿ ಪಡೆದು ಆಯಾ ಆಸ್ಪತ್ರೆಗಳಲ್ಲಿ ಅಳವಡಿಸಿಕೊಳ್ಳಲಿದ್ದಾರೆ.ಈ ಹಿಂದೆ ಉದರ ಶಸ್ತ್ರಚಿಕಿತ್ಸೆಗೊಳಿಸಿ ಗರ್ಭ ಚೀಲ ತೆಗೆದು ಮತ್ತೆ ಹೊಲಿಗೆ ಹಾಕಲಾಗುತ್ತಿತ್ತು. ಬಹುದಿನದ ವರೆಗೆ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ಇದ್ದು, ಹೊಲಿಗೆ ಕೂಡಿಕೊಂಡ ನಂತರ ಸಹಜ ಜೀವನಕ್ಕೆ ಮರಳಬಹುದಿತ್ತು. ಇದೀಗ ನೂತನ ಲ್ಯಾಪ್ರೋಕ್ಕೋಪಿಕಲ್ ಸರ್ಜರಿಯಿಂದ ಒಂದೆರಡು ದಿನಗಳಲ್ಲೇ ರೋಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಬಹುದು. ವಿವಿಎಫ್ ಸಮಸ್ಯೆಗೆ ಸಹ ಮೂತ್ರಕೋಶ ತಜ್ಞರ ಬಳಿ ತೆರಳಬೇಕಿತ್ತು. ಇದೀಗ ತರಬೇತಿ ಪಡೆದು ಪರಿಣತಿ ಹೊಂದಿದ ನಂತರ ಇದೇ ಮಾದರಿ ಶಸ್ತ್ರಚಿಕಿತ್ಸೆ ನಡೆಸಿ ವೈದ್ಯರು ಪರಿಹರಿಸಬಹುದು. ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ವಿಧಾನಗಳು ಆವಿಷ್ಕಾರ ಆಗುತ್ತಲೇ ಇರುತ್ತದೆ. ಕಲಿಕೆ ಮತ್ತು ಅಳವಡಿಕೆಯಿಂದ ರೋಗಿಗಳಿಗೆ ಉಪಯೋಗವಾಗಲಿದೆ. ಕಾರ್ಯಾಗಾರದಲ್ಲಿ ಜಿಲ್ಲಾ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಭಾಗವಹಿಸಲಿದ್ದಾರೆ ಎಂದು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಧನಶೇಖರ್ ತಿಳಿಸಿದ್ದಾರೆ.




Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248